## ಇಲ್ಲಿಯವರೆಗೆ...

ಅಮಾವಾಸ್ಯೆಯ ಕತ್ತಲಲ್ಲಿ ದೆವ್ವ, ಪಿಶಾಚಿಗಳಂತಹ ಕ್ಷುದ್ರಶಕ್ತಿಗಳಿಗೆ ಎಲ್ಲಿಲ್ಲದ ಉತ್ಸಾಹ, ಶಕ್ತಿ ಬಂದು ಬಿಡುತ್ತವೆ. ಆದರೆ ಕಾಲ ಬದಲಾಗಿ ಕೈಗಾರಿಕೆ, ಬಸ್ಸು, ರೈಲು ಸಂಚಾರದಂತಹ ಕೆಲಸಗಳಲ್ಲಿ ಜನ ರಾತ್ರಿಯೂ ಎಚ್ಚರವಾಗಿಯೇ ಇರುವುದರಿಂದ ಜನರೇ ಕ್ಷುದ್ರಶಕ್ತಿಗಳಾಗಿ ಬದಲಾಗಿಬಿಟ್ಟಿದ್ದಾರೆ. ಗೋಡೆಯ ಮೇಲೆ ದೆವ್ವದಂತೆ ತೂಗಾಡುತ್ತಿದ್ದ ಕೃಷ್ಣನ ಆತ್ಮದ ಸ್ಥಿತಿಯೂ ಇದಕ್ಕಿಂತ ಹೊರತಲ್ಲ. ಬೆಂಗಳೂರಿನಲ್ಲಿ ಫಾರ್ಮ್‌ಹೌಸ್‌ನಲ್ಲಿದ್ದ ಕೃಷ್ಣ ಹದಿನೈದು ವರ್ಷ ಕಾಲ ಚೆನ್ನಾಗಿ ಬಾಳಿ ಬದುಕಿದ್ದ. ಆತನ ಹಠಾತ್ ಸಾವು ಹೇಗೆ ಬಂತು, ಆತ್ಮ ಹೇಗೆ ದೆವ್ವ ಆಯಿತು ಎಂಬುದು ಮಾತ್ರ ಕೃಷ್ಣನಿಗೂ ಅಚ್ಚರಿ ಮೂಡಿಸಿತ್ತು. ಇತ್ತ ಕಡೆ ದಮಯಂತಿ ಅಮೆರಿಕಕ್ಕೆ ಹೋಗಿದ್ದಳು. ಹೋದ ಕೆಲ ಸಮಯ ಟ್ರಂಕಾಲ್ ಮಾಡಿ ಮಾತನಾಡುತ್ತಿದ್ದರು ಸಾವಿತ್ರಿ–ಕೃಷ್ಣ. ಕ್ರಮೇಣ ಇಮೇಲ್, ವಾಟ್ಸ್‌ಅಪ್ ಮೂಲಕ ಸಂವಹನ ನಡೆಯುತ್ತಿತ್ತು. ಒಂದು ದಿನ ದಮಯಂತಿ ಇದ್ದಕ್ಕಿದ್ದ ಹಾಗೆ ಒಬ್ಬ ಹುಡುಗನನ್ನು ಪರಿಚಯಿಸಿ ಈತ ಜಾನ್ ಟೇಲರ್. ಇವನನ್ನು ಪ್ರೀತಿಸುವುದಾಗಿ ಶಾಕ್ ಟ್ರೀಟ್‌ಮೆಂಟ್ ಕೊಡುತ್ತಾಳೆ. ಒಂದು ದಿನ ಆತನನ್ನು ಕರೆದುಕೊಂಡು ಬೆಂಗಳೂರಿಗೆ ಬಂದೇಬಿಟ್ಟಳು ದಮಯಂತಿ. ವಿಮಾನ ನಿಲ್ದಾಣಕ್ಕೆ ಸಾವಿತ್ರಿಯನ್ನು ಕರೆದರೂ ಆಕೆ ಹೋಗಲು ಒಪ್ಪಲಿಲ್ಲ. ಕೊನೆಗೂ ಮನೆಗೆ ಬಂದರು. ಇಲ್ಲಿನ ಊಟ ತಿಂಡಿಯನ್ನು ಮನಸಾರೆ ಹೊಗಳುತ್ತಾನೆ ಜಾನ್. ರಾತ್ರಿ ಒಂದೇ ಕೋಣೆಯಲ್ಲಿ ಮಲಗಲು ಜಾನ್–ದಮಯಂತಿ ಹೋಗುತ್ತಾರೆ. ಆಗ ಮನೆಯವರು ಒಪ್ಪುವುದಿಲ್ಲ. ಆದಕ್ಕೆ ಹೋಟೆಲ್‌ನಲ್ಲಿ ರೂಂ ಮಾಡಿಕೊಂಡು ಇರುವುದಾಗಿ ದಮಯಂತಿ ಹೇಳುತ್ತಾಳೆ. ಆಗ ತಾಯಿಗೆ ಕೋಪ ಬರುತ್ತದೆ. ಇಬ್ಬರೂ ಒಂದೇ ಕೋಣೆಯಲ್ಲಿ ಇದ್ದರೂ ನಿದ್ರಿಸಿದಂತೆ ಕಾಣಲಿಲ್ಲ. ಆ ರಾತ್ರಿ ಮನೆಯವರ ಪಾಲಿಗೆ ಘೋರ ರಾತ್ರಿಯಾಗಿ ಪರಿಣಮಿಸುತ್ತದೆ.



ಪೂಜೆಗಳನ್ನು ಮಾಡುತ್ತಿದ್ದಾರೆ. ಬಹುಶಃ ನನ್ನ ತಂದೆ ತಾಯಿಯ ಪಕ್ಕದಲ್ಲಿ ನನಗೆ ಈಗಾಗಲೇ ಗುಂಡಿ ತೋಡಿರಬೇಕು? ನನ್ನ ಕಾಲುಗಳು, ಎದೆಯ ಮೇಲೆ ಸಾಕಷ್ಟು ಹೂವಿನ ಹಾರಗಳನ್ನು ಹಾಕಲಾಗಿದೆ. ಮೂಗಿನ ಹೊಳ್ಳೆಗಳಲ್ಲಿ ಬಿಳಿ ಹತ್ತಿಯನ್ನು ಸೇರಿಸಲಾಗಿದೆ. ಎರಡು ಕಣ್ಣುಗಳ ಮೇಲೆ ಮತ್ತು ಹಣೆಯ ಮೇಲೆ ಒಂದೊಂದು ರೂಪಾಯಿ ನಾಣ್ಯಗಳನ್ನು ಇಡಲಾಗಿತ್ತು. ಎರಡು ಕಾಲಿನ ದೊಡ್ಡ ಬೆರಳುಗಳನ್ನು ಹತ್ತಿರಕ್ಕೆ ಸೇರಿಸಿ ಬಟ್ಟೆ ಪೇಲಿಕೆಯಿಂದ ಬಿಗಿದು ಕಟ್ಟಲಾಗಿದೆ. ಎರಡೂ ಕೈಗಳನ್ನು ದೇಹದ ಪಕ್ಕದಲ್ಲಿಯೇ ಎರಡೂ ಕಡೆ ಮಲಗಿಸಿದಂತೆ ಇಡಲಾಗಿದೆ. ತಲೆಯ ಹತ್ತಿರ ಒಂದು ದೊಡ್ಡ ಗ್ಲಾಸ್ನಲ್ಲಿ ಅಕ್ಕಿ ಹಾಕಿ ಸಿಕ್ಕಿಸಿದ್ದ ಊದುಕಡ್ಡಿಗಳು ಯಥೇಚ್ಛವಾಗಿ ಹೊಗೆಯನ್ನು ಉಗುಳುತ್ತಿವೆ. ಆ ಹೊಗೆ ಗಾಳಿ ಬೀಸಿದ ಕಡೆಗೆಲ್ಲ ಸುರುಳಿಸುರಳಿಯಾಗಿ ಹಾರಾಡುತ್ತಿದೆ. ಸತ್ತವರ ಕಣ್ಣುಗಳ ಮೇಲೆ ನಾಣ್ಯಗಳನ್ನು ಯಾಕೆ ಇಡುತ್ತಾರೊ ನನಗೆ ಗೊತ್ತಿಲ್ಲ? ಆದರೆ ಸತ್ತೋದವರು ಒಂದೇ ಒಂದು ರೂಪಾಯಿ ನಾಣ್ಯವನ್ನು ಸಹ ಈ ಲೋಕದಿಂದ ತೆಗೆದುಕೊಂಡು ಹೋಗಲು ಸಾಧ್ಯವಿಲ್ಲ ಎಂಬುದನ್ನು ತೋರಿಸಲು ಇಡಬಹುದೇನೊ? ಆದರೆ ಈಜಿಪ್ಟ್‌ನ ಮಮ್ಮಿಗಳ ಜೊತೆಗೆ ಚಿನ್ನದ ಖಜಾನೆಗಳನ್ನೇ ಇಟ್ಟು ಮುಚ್ಚಿದ್ದರು. ಮನುಷ್ಯರ ಪ್ರಪಂಚವನ್ನು ಹುಚ್ಚು ಪ್ರಪಂಚ ಎನ್ನಲೇಬೇಕು.

ಸಾವಿನ ಮೆರವಣಿಗೆಗೆ ಬೇಕಾದ ಮುಖ್ಯ ಐಟಂ ಎಂದರೆ ತಮಟೆ. ತಮಟೆ ಬಾರಿಸುವವರು ಈಗ ನನ್ನ ದೇಹಕ್ಕೆ ಸ್ವಲ್ಪ ದೂರದಲ್ಲಿ ಬೆಂಕಿ ಹಾಕಿಕೊಂಡು ತಮಟೆಗಳನ್ನು ಕಾಯಿಸಿಕೊಳ್ಳುತ್ತಿದ್ದಾರೆ. ಇತ್ತೀಚೆಗೆ ದೇಶದಲ್ಲಿ ಗೋವಿನ ಬಗ್ಗೆ ಸಮಸ್ಯೆ ಉದ್ಭವವಾಗಿ ಗೋವುಗಳನ್ನು ಕೊಲ್ಲಬಾರದು ಎಂದು ಆಜ್ಞೆ ಬಂದಿರುವುದರಿಂದ ಭೀತಿಗೊಂಡಿರುವ ನಮ್ಮೂರಿನ ದಲಿತರು ಗೋವಿನ ಚರ್ಮದ ತಮಟೆಗಳ ಬದಲಿಗೆ ಯಾವುದೊ ರೀತಿಯ ಪ್ಲ್ಯಾಸ್ಟಿಕ್ ತಮಟೆಗಳನ್ನು ಸಹ ತಂದಿಟ್ಟುಕೊಂಡಿದ್ದಾರೆ. ಈ ತಮಟೆಯ ಬಗ್ಗೆ ನನಗೆ ಬಹಳ ಕುತೂಹಲವಿದೆ. ಭೂಮಿಯ ಮೇಲೆ ನಿಜವಾದ ದೇವರೆಂದರೆ ನನಗೆ ತಿಳಿದ ಹಾಗೇ ಶಿವನೊಬ್ಬನೆ. ಶಿವನ ಡಮರು ಅಥವಾ ಡಮರುಗವೂ ಅಷ್ಟೇ. ಬಹುಶಃ ಭೂಮಿಯ ಮೇಲಿನ ಆದಿವಾದ್ಯ ಡಮರುಗ ಇರಬೇಕು. ಇದರಲ್ಲಿ ವಿಶ್ವ ಮತ್ತು ವಿಶ್ವದ ಲಯವೂ ಸೇರಿಕೊಂಡಿದೆ ಎನ್ನಲಾಗಿದೆ. ಇದರಿಂದ ಶಿವನು ಆಧ್ಯಾತ್ಮಿಕ ಶಬ್ದವನ್ನು ಉಂಟು ಮಾಡುತ್ತಾನೆ. ತಮಟೆ ಎನ್ನುವುದು ಮೂಲ ಡಮರುಗ ಸ್ವರೂಪದ ಒಂದು ಎಳೆ. ದಕ್ಷಿಣ ಭಾರತದಲ್ಲೇ ಅಲ್ಲ ಇಡೀ ದೇಶದ ಮೂಲೆ ಮೂಲೆಗಳಲ್ಲೂ ತಮಟೆ ಅನೇಕ ಸ್ವರೂಪಗಳನ್ನು ಪಡೆದುಕೊಂಡಿರುವುದನ್ನು ನೋಡಬಹುದು.

### ತೇಜಸ್ ಕಥೆ

ನನ್ನನ್ನು ಸಮಾಧಿಗೆ ಸೇರಿಸುವ ಹೊತ್ತು ಹತ್ತಿರವಾಗುತ್ತಿರುವುದರಿಂದ ಈಗ ತೇಜಸ್ ಕಥೆಯನ್ನು ನಿಮಗೆ ಸ್ವಲ್ಪ ಹೇಳಿಬಿಡುತ್ತೇನೆ. ಕೆಲಸಕ್ಕಾಗಿ ಹೈದರಾಬಾದಿಗೆ ಹೋದ ತೇಜಸ್ ಎರಡು ವರ್ಷಗಳಾದ ಮೇಲೆ ಅಮೆರಿಕ ಸೇರಿಕೊಂಡ. ಈ ನಡುವೆ ಬೆಂಗಳೂರಿನಲ್ಲಿ ಒಂದು ಹುಡುಗಿಯ ಜೊತೆಗೆ ಓಡಾಡುತ್ತಿದ್ದ ವಿಷಯವನ್ನು ನಿಮಗೆ ಆಗಲೇ ಸ್ವಲ್ಪ ಹೇಳಿದ್ದೆ. ತೇಜಸ್ ಹೈದರಾಬಾದಿಗೆ ಹೋಗುವುದಕ್ಕೆ ಮುಂಚೆ ಆ ಹುಡುಗಿ ಮತ್ತು ತೇಜಸ್ ಏನು ಮಾತನಾಡಿಕೊಂಡರೊ ನಮಗ್ಯಾರಿಗೂ ಏನೂ ತಿಳಿಯದು. ಹುಡುಗೀಗೂ, ತೇಜಸ್‌ಗೂ ಏನೋ ಜಗಳವಾಯಿತಂತೆ. ಈಗ ಇಬ್ಬರೂ ಮಾತನಾಡುತ್ತಿಲ್ಲವಂತೆ' ಎಂದಳು. `ನಿನಗೆ ಹೇಗೆ ಗೊತ್ತಾಯಿತು?' ಎಂದೆ. 'ನಮ್ಮ ತಂದೆ ಹೇಳಿದರು' ಎಂದಳು. 'ಒಳ್ಳೆಯದೇ ಆಯಿತು. ಬಿಡು' ಎಂದೆ. 'ಯಾಕೆ ಹಾಗೆ ಹೇಳ್ತೀರ?' ಎಂದು ಪ್ರಶ್ನಿಸಿದಳು. 'ಇನ್ನ ನಾನು ಏನು ಹೇಳಲಿ? ಅದ್ಯಾರೊ ರಾಧಾ ಎಂಬ ಹುಡುಗಿಯನ್ನ ಪ್ರೀತಿ ಮಾಡಿದ. ದಮಯಂತಿಗೆ ಏನೊ ಆಯಿತು ಅಂತ, ಆ ಹುಡುಗಿ ತೇಜಸ್ ಕೈಬಿಟ್ಟಳು. ಈ ಹುಡುಗಿ ಯಾರೊ ಏನು ಕಥೆಯೊ?' ಎಂದೆ. 'ಅಂದರೆ ತೇಜಸ್ ಮದುವೆ ಆಗುವುದು ಬೇಡವೆ?' ಪ್ರಶ್ನಿಸಿದಳು. 'ಮದುವೆ ಆಗುವುದು ಯಾರು ಬೇಡ ಅಂದರು? ಯಾರೊ ಒಂದು ಒಳ್ಳೆ ಫ್ಯಾಮಿಲಿ ಹುಡುಗೀನ ನೋಡಿ ಮದುವೆ ಮಾಡಿಕೊಂಡ್ರೆ ಸರಿ. ಅದು ಬಿಟ್ಟು ಯಾರ್‌ಯಾರನ್ನೋ ಲವ್ ಮಾಡಿದರೆ ಹೇಗೆ?' ಎಂದೆ. 'ಅಯ್ಯೊ ಈಗ ಯಾವ ಫ್ಯಾಮಿಲಿಯಲ್ಲಿ ಹುಡುಗರು, ಹುಡುಗೀರು ಒಳ್ಳೆಯವರಾಗಿದ್ದಾರೆ' ಎಂದಳು. ಸಾವಿತ್ರಿಯ ಮಾತು ಕೇಳಿ ತಲೆದೂಗಿದೆ.